

# ಬೀರಬಲ್ಲನ ಬುದ್ಧಿವಂತಿಕೆ

ಹಿಂದೆ ಅಕಬರನ ಆಸ್ಥಾನದಲ್ಲಿ ಬೀರಬಲ್ಲನೆಂಬ ಒಬ್ಬ ಬುದ್ಧಿವಂತನಿದ್ದನು. ಅವನು ತನ್ನ ಜಾಣ್ಮೆಯ ಮಾತುಗಳಿಂದ ಎಲ್ಲರ ಪ್ರೀತಿ ಗೌರವಕ್ಕೆ ಪಾತ್ರನಾಗಿದ್ದನು. ಅಕಬರನು ಕೇಳುವ ಪ್ರಶ್ನೆಗಳಿಗೆ ಬೀರಬಲ್ಲನು ಸಮರ್ಪಕವಾದ ಉತ್ತರಗಳನ್ನು ಕೊಟ್ಟು ಸಂತೋಷಗೊಳಿಸುತ್ತಿದ್ದನು. ಇದರಿಂದ ಅಕಬರನು ಬೀರಬಲ್ಲನ ಮೇಲೆ ಎಲ್ಲ ಕವಿ ಪಂಡಿತರಿಗಿಂತಲೂ ಹೆಚ್ಚಿನ ಗೌರವ ತೋರಿಸುತ್ತಿದ್ದನು.

ಧರ್ಮಸಹಿಷ್ಣುವಾದ ಅಕಬರನು ತನ್ನ ಆಸ್ಥಾನದಲ್ಲಿ ಎಲ್ಲ ಜಾತಿ ಮತದವರಿಗೆ ಆಶ್ರಯ ನೀಡಿದ್ದನು. ಅನೇಕ ಪಂಡಿತರು ಅವನ ಆಸ್ಥಾನದಲ್ಲಿದ್ದರು. ದೊರೆಯು ಸಂದರ್ಭಾನುಸಾರವಾಗಿ ಎಲ್ಲಾ ಕವಿ ಪಂಡಿತರಿಗೆ ಬಹುಮಾನ ನೀಡಿ ಸಂತೋಷಗೊಳಿಸುತ್ತಿದ್ದನು. ಒಮ್ಮೆ ಅಕಬರನ ಆಸ್ಥಾನದಲ್ಲಿದ್ದ ಒಬ್ಬ ಪಂಡಿತನಿಗೆ ಜಡ್ಡಾಯಿತು. ರಾಜ ವೈದ್ಯರಿಗೆ ತೋರಿಸಿದರೂ ಅವನ ರೋಗ ವಾಸಿಯಾಗಲಿಲ್ಲ. ಕೊನೆಗೆ ಆ ಪಂಡಿತನು ರೋಗ ಉಲ್ಬಣಗೊಂಡು ಸಾವಿಗೀಡಾದನು. ಹೆಂಡತಿ ಮತ್ತು ಮಗ ಅವನನ್ನೇ ಅವಲಂಬಿಸಿದ್ದರಿಂದ ಅವರು ದುಃಖಕ್ಕೀಡಾದರು.

ಆ ಪಂಡಿತನ ಮಗನಿಗೆ ಓದಲು ಬರೆಯಲು ಬರುತ್ತಿರಲಿಲ್ಲ. ತಂದೆ ಸಾವಿಗೀಡಾಗಿದ್ದರಿಂದ ಅವನು ಜೀವನೋಪಾಯದ ದಾರಿಗಾಣದೆ ಚಿಂತೆಗೀಡಾದನು. ಒಂದು ದಿನ ಅವನು ಬೀರಬಲ್ಲನ ಹತ್ತಿರ ಹೋಗಿ 'ತಾವು ನನಗೆ ಬದುಕಿನ ದಾರಿ ತೋರಿಸಬೇಕು. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ತಂದೆಯಂತೆ ನಾನು ಪಂಡಿತನಾಗಬೇಕೆಂಬ ಬಯಕೆಯಿದೆ. ಬುದ್ಧಿವಂತರಾದ ತಾವು ನನಗೆ ಉಪಾಯ ಹೇಳಿ ಉಪಜೀವನದ ಮಾರ್ಗ ಹೇಳಬೇಕು. ನಿಮ್ಮ ಕಾಲಿಗೆ ಬೀಳುತ್ತೇನೆ' ಎಂದು ತನ್ನ ಅಸಹಾಯಕತೆಯ ದೈನ್ಯಸ್ಥಿತಿಯನ್ನು ಬೀರಬಲ್ಲನಿಗೆ ವಿವರಿಸಿದನು. ಆಗ ಬೀರಬಲ್ಲನು ಆ ಪಂಡಿತನ ಮಗನಿಗೆ 'ಓದು ಬರಹ ಬರಲಾರದ ನೀನು ಹೇಗೆ ಪಂಡಿತನಾಗಲು ಸಾಧ್ಯ? ಇದು ಆಗದ ಕೆಲಸ. ಈ ಆಸೆಯನ್ನು ಬಿಟ್ಟುಬಿಡು' ಎಂದನು. ಈ ಮಾತುಗಳನ್ನು ಕೇಳಿ ಆ ಪಂಡಿತನ ಮಗನು 'ಹೇಗಾದರೂ ಮಾಡಿ ನನ್ನನ್ನು ಪಂಡಿತನನ್ನಾಗಿಸಿ ಬದುಕುವಂತೆ ಏರ್ಪಾಟು ಆದರೆ ನಿಮ್ಮ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆ. ಬುದ್ಧಿವಂತರಾದ ತಾವು ಸಾವಿರಾರು ಜನರಿಗೆ ಸರಿಯಾದ ದಾರಿ ತೋರಿಸಿ ಪ್ರಸಿದ್ಧರಾಗಿರುವಿರಿ. ನನ್ನ ಆಸೆಯನ್ನು ಪೂರೈಸಿರಿ' ಎಂದು ಅಂಗಲಾಚಿ ಬೇಡಿಕೊಂಡನು.

ಬೀರಬಲ್ಲನು ಆಗ ಕ್ಷಣಕಾಲ ಯೋಚಿಸಿ ಆ ಪಂಡಿತನ ಮಗನಿಗೆ ''ನಾನು ಏಳೆಂಟು ಚಿಕ್ಕಮಕ್ಕಳು ಸೇರಿಕೊಂಡು ಆಟವಾಡುವ ಸ್ಥಳದಲ್ಲಿಗೆ ಹೋಗಿ ಅವರಿಗೆ ಮಿಠಾಯಿಕೊಟ್ಟು ನಿನ್ನನ್ನು ತೋರಿಸಿ 'ಆ ಮನುಷ್ಯನಿಗೆ ನೀವು ಪಂಡಿತನೆಂದು ಕರೆಯಿರಿ, ಅವನೆಷ್ಟು ಸಿಟ್ಟಿಗೇಳುತ್ತಾನೆ ನೋಡಿರಿ' ಎಂದು ಹೇಳುತ್ತೇನೆ. ಆ ಹುಡುಗರು ನಿನಗೆ ಪಂಡಿತನೆಂದು ಕರೆದಾಗ ನೀನು ಸಿಟ್ಟಿನಿಂದ ಬಡಿಯಲಿಕ್ಕೆ ಅವರ ಕಡೆಗೆ ಹೋಗು. ಆದರೆ ಅವರನ್ನು ಬಡಿಯದೆ ಕೈಯನ್ನು ಮೇಲಕ್ಕೆತ್ತಿ ನಿನ್ನ ಕೋಪವನ್ನು ಪ್ರದರ್ಶಿಸು. ಮುಂದೆ ಎಲ್ಲಾ ಸರಿಹೋಗುತ್ತದೆ' ಎಂದನು. ಆ ಪಂಡಿತನ ಮಗನು ಬೀರಬಲ್ಲನ ಈ ಮಾತುಗಳನ್ನು ಕೇಳಿ ಅದೇ ರೀತಿ ನಡೆಯುವುದಾಗಿ ಹೇಳಿದನು. ಬೀರಬಲ್ಲನು ಒಂದೆರಡು ಸಲ ಸಣ್ಣ ಹುಡುಗರು ಸೇರಿರುವ ಕಡೆಯಲ್ಲಿ ಹೋಗಿ ಪಂಡಿತನ ಮಗನನ್ನು ಆ ಹುಡುಗರಿಗೆ ತೋರಿಸಿ 'ನೀವು ಆತನಿಗೆ ಪಂಡಿತನೆಂದು ಕರೆದು ನಿಮ್ಮ ಮನೆಯ ಕಡೆಗೆ ಓಡಿ ಹೋಗಿರಿ. ಅವನು ಎಷ್ಟು ಸಿಟ್ಟಿಗೇಳುತ್ತಾನೆ ನೋಡಿರಿ' ಎಂದು ಅವರಿಗೆ ಮಿಠಾಯಿ